
# ಘಟನೆಗಳಲ್ಲಿ ಗಾಂಧಿ

**ಜಿ.ಎಸ್. ಜಯದೇವ್**

### ಪ್ರಾಮಾಣಿಕ ಯುವಕ, ಗಾಂಧಿ ಮತ್ತು ಸಾರ್ವಜನಿಕ ಹಣ

ಗಾಂಧೀಜಿಯವರ ವ್ಯಕ್ತಿತ್ವವನ್ನು ದೂರದಿಂದ ಅರಿತವರಿಗೆ ಅವರೊಬ್ಬ ಅತಿ ವಿನಯದ, ಸೌಮ್ಯ ಸ್ವಭಾವದ, ಕಠಿಣತೆಯೇ ಇಲ್ಲದ ಸಾಧುವಿನ ಹಾಗೆ ಕಾಣುತ್ತಾರೆ. ಆದರೆ ಗಾಂಧೀಜಿಯನ್ನು ಹತ್ತಿರದಿಂದ ಬಲ್ಲವರಿಗೆ ಅವರ ಕಠಿಣ ನಿಲುವುಗಳ ಬಿಸಿ ತಟ್ಟದೆ ಇರುವುದಿಲ್ಲ. ಸಂಸ್ಕೃತ ಶ್ಲೋಕವೊಂದರ ಮಾತಿನಂತೆ **ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ** – ವಜ್ರಕ್ಕಿಂತಲೂ ಕಠೋರವಾಗಿ, ಹೂವಿಗಿಂತಲೂ ಮೃದುವಾಗಿ ಅವರು ನಡೆದುಕೊಳ್ಳುತ್ತಿದ್ದುದುಂಟು.



ಗಾಂಧೀಜಿಯವರ ನಿಕಟವರ್ತಿ ದೀನಬಂಧು ಸಿ.ಎಫ್. ಆಂಡ್ರೂಸ್‌ರವರು ಬಹಳ ಮೃದು ಸ್ವಭಾವದವರು. ಇವರಿಗೆ ಗಾಂಧೀಜಿಯವರಂತೆ ಪರಿಸ್ಥಿತಿಗೆ ಅನುಗುಣವಾಗಿ ನಿಷ್ಠುರವಾಗಿ ಇರಲು ಬರುತ್ತಲೇ ಇರಲಿಲ್ಲ. ಅದು ೧೯೨೬ ರ ಕಾಲ. ಆಂಡ್ರೂಸ್ ಅವರು ಗಾಂಧೀಜಿಯವರೊಡನೆ ಸಬರಮತಿ ಆಶ್ರಮದಲ್ಲಿ ಇದ್ದರು. ಈ ಸಂದರ್ಭದಲ್ಲಿ ಒಬ್ಬ ಯುವಕ ಗಾಂಧೀಜಿಯವರ ಅನುಕಂಪವನ್ನು ಅರಸಿ ಬಂದ. ಈತ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ. ತನ್ನ ಹೈಸ್ಕೂಲ್ ಶಾಲಾಶಿಕ್ಷಕನ ಕೆಲಸಕ್ಕೆ ರಾಜೀನಾಮೆ ನೀಡಿ, ತ್ಯಾಗ ಮನೋಭಾವದಿಂದ ದೇಶಕ್ಕಾಗಿ ಈ ಕೈಂಕರ್ಯ ಕೈಗೊಂಡಿದ್ದ. ಆದರೆ ಇವನಿಗೆ ಒಂದು ಸಮಸ್ಯೆ ಎದುರಾಗಿತ್ತು. ಈತ ಸಾಕಷ್ಟು ಹಣವನ್ನು ಸಾರ್ವಜನಿಕರಿಂದ ಸಂಗ್ರಹಿಸಿದ್ದು ಅದನ್ನು ಕಾಂಗ್ರೆಸ್ ಕಾರ್ಯಚಟುವಟಿಕೆಗಳಿಗಾಗಿ ವೆಚ್ಚ ಮಾಡಿದ್ದ. ಕಾರ್ಯಕ್ರಮಗಳೆಲ್ಲಾ ಮುಗಿದ ಮೇಲೆ ಸಮಿತಿಯ ಇತರ ಸದಸ್ಯರೆಲ್ಲರೂ ಲೆಕ್ಕ ಒಪ್ಪಿಸುವಂತೆ ಕೇಳಿಕೊಂಡರು. ನಿಸ್ಪೃಹನಾಗಿ ಕೆಲಸ ಮಾಡಿದ ಈತ ಸುಳ್ಳು ಲೆಕ್ಕ, ಸುಳ್ಳು ರಶೀತಿಗಳನ್ನು ಬರೆಯುವವನಲ್ಲ. ಆದರೆ ಕೆಲಸದ ಗಡಿಬಿಡಿಯಲ್ಲಿ ಖರ್ಚು ಮಾಡಿದ ಎಲ್ಲ ವಿವರಗಳನ್ನೂ ಬರೆದುಕೊಳ್ಳದೆ ಇದ್ದುದರಿಂದ ಸುಮಾರು ಒಂದು ಸಾವಿರ ರೂಪಾಯಿಗಳಿಗೆ ಲೆಕ್ಕ ಸಿಗಲಿಲ್ಲ. ಸಮಿತಿಯ ಸದಸ್ಯರು ಲೆಕ್ಕ ಒಪ್ಪಿಸುವಂತೆ ಪಟ್ಟು ಹಿಡಿದರು. ಪ್ರಾಮಾಣಿಕವಾಗಿ ಒಂದು ಪೈಸೆಯಷ್ಟೂ ಗೌರವ ಧನವನ್ನು ಪಡೆಯದೆ ನಿಸ್ವಾರ್ಥದಿಂದ ಕೆಲಸ ಮಾಡಿದ್ದ ಇವನಿಗೆ ಸಮಿತಿಯ ಸದಸ್ಯರ ಕಠಿಣ ನಿಲುವು ಹಿಡಿಸಲಿಲ್ಲ.

ತನ್ನ ನಿಸ್ವಾರ್ಥ ಸೇವೆಯನ್ನು ಗುರುತಿಸುವ ಕೃತಜ್ಞತೆಯೇ ಇವರಿಗೆ ಇಲ್ಲವಲ್ಲ ಎಂದುಕೊಂಡನು. ಕೊನೆಗೆ ಈ ಪ್ರಸಂಗವನ್ನು ನೇರವಾಗಿ ಗಾಂಧೀಜಿಯವರಿಗೆ ತಿಳಿಸಿ ಅವರ ಶಿಫಾರಸ್ಸಿನಿಂದ ಈ 'ಕೃತಘ್ನ' ಕಾಂಗ್ರೆಸ್ ಸಮಿತಿಯ ಸದಸ್ಯರ ಬಾಯಿ ಮುಚ್ಚಿಸಬೇಕೆಂದು ಭಾವಿಸಿ ನೇರವಾಗಿ ಸಬರಮತಿ ಆಶ್ರಮಕ್ಕೆ ಬಂದು ಗಾಂಧೀಜಿಯವರನ್ನು ಭೇಟಿಯಾದ.

ಈ ಸಮಯದಲ್ಲಿ ಗಾಂಧೀಜಿ ಮತ್ತು ದೀನಬಂಧು ಆಂಡ್ರೂಸ್‌ರವರು ಒಟ್ಟಿಗೆ ಇದ್ದರು. ಗಾಂಧೀಜಿ ಆ ಯುವಕನ ಅಹವಾಲನ್ನು ಆಮೂಲಾಗ್ರವಾಗಿ ಆಲಿಸಿದರು. ಈ ಯುವಕ ಹಣ ದುರುಪಯೋಗ ಮಾಡದಿರುವುದು ಅವರಿಗೆ ಸ್ಪಷ್ಟವಾಗಿ ಕಂಡಿತು. ಅನಂತರ, ಗಾಂಧೀಜಿ, "ನನ್ನಿಂದ ಏನಾಗಬೇಕು?" ಎಂದು ಯುವಕನನ್ನು ಕೇಳಿದರು. ಆ ಯುವಕ ಹೇಳಿದ, "ಗಾಂಧೀಜಿ, ನೀವು ಆ ಕಾಂಗ್ರೆಸ್ ಸಮಿತಿಯ ಸದಸ್ಯರಿಗೆ, ನಾನು ನಿರಪರಾಧಿ ಎಂದು ತಿಳಿಯಹೇಳಿ ಒಂದು ಪತ್ರ ಬರೆದು ಕೊಡಿ." ಈ ಸಂವಾದವನ್ನು ಆಲಿಸುತ್ತಿದ್ದ ದೀನಬಂಧು ಆಂಡ್ರೂಸ್ ಅವರಿಗೆ ಯುವಕನ ಮೇಲೆ ಅಪಾರ ಅನುಕಂಪ ಮೂಡಿತು. ಅವರು ಯುವಕನ ಪರವಾಗಿ ತಲೆದೂಗುತ್ತಾ, ಗಾಂಧೀಜಿಯವರು ಯುವಕನಿಗೆ ಏನಾದರೂ ಸಹಾಯ ಮಾಡುತ್ತಾರೆಂದು ನಿರೀಕ್ಷಿಸುತ್ತಿದ್ದರು. ಇದುವರೆಗೆ ಮೃದುವಾಗಿದ್ದ ಗಾಂಧೀಜಿ, ಅಷ್ಟೇ ಮೃದುವಾಗಿ, ಆದರೆ ದೃಢವಾಗಿ ಹೇಳಿದರು. "ನಾನು ಇಂತಹ ಯಾವ ಪತ್ರವನ್ನೂ ಬರೆಯುವುದಿಲ್ಲ. ನೀನು ಹಣ ದುರುಪಯೋಗ ಮಾಡಿರುವೆ ಎಂದು ನಾನು ಹೇಳುವುದಿಲ್ಲ. ನಿನ್ನ ಮಾತನ್ನು ಆಲಿಸಿದ ಮೇಲೆ ನೀನು ಪ್ರಾಮಾಣಿಕ ವ್ಯಕ್ತಿಯೆಂದು ನನಗೆ ತಿಳಿಯಿತು. ಆದರೆ ಸಾರ್ವಜನಿಕರ ಪ್ರತಿಯೊಂದು ಪೈಸೆಯೂ ಪವಿತ್ರ. ನನ್ನ ಮಟ್ಟಿಗೆ ಹೇಳುವುದಾದರೆ ಲೆಕ್ಕ ಇಡದ ಪ್ರತಿ ಪೈಸೆಯೂ ದುರುಪಯೋಗವಾದಂತೆಯೇ. ಸಾರ್ವಜನಿಕರ ಹಣವನ್ನು ಉಪಯೋಗಿಸುವಾಗ ಸರಿಯಾಗಿ ಲೆಕ್ಕಪತ್ರ ಇಡುವುದು ಕೇವಲ

ಮಾನ್ಯ ಲೇಖಕರು ಸಮಾಜಸೇವಕರು. ಚಾಮರಾಜನಗರದಲ್ಲಿ ಅನಾಥ ಮಕ್ಕಳಿಗಾಗಿ **ದೀನಬಂಧು** ಎನ್ನುವ ಮಕ್ಕಳ ಮನೆಯನ್ನು ನಡೆಸುತ್ತಿದ್ದಾರೆ. ಅದಲ್ಲದೆ ಒಂದು ಶಾಲೆಯನ್ನೂ, ಅಸಹಾಯಕ ಹೆಣ್ಣುಮಕ್ಕಳಿಗಾಗಿ ಪುನರ್ವಸತಿ ನಿಲಯವನ್ನೂ ನಡೆಸುತ್ತಿದ್ದಾರೆ.

ಹಣಕ್ಕಾಗಿ ಅಲ್ಲ. ಅದು ನಮ್ಮ ನಡತೆಗೆ ಹಿಡಿದ ಕನ್ನಡಿ. ಹಣಕ್ಕಿಂತ ನಡತೆ ಮುಖ್ಯ. ಸರಿಯಾಗಿ ಲೆಕ್ಕ ಇಡದೆ, ರಶೀತಿಗಳನ್ನೂ ಇಡದೆ ಇದ್ದುದು ಗುರುತರವಾದ ಅಪರಾಧ. ನಿನ್ನನ್ನು ಲೆಕ್ಕ ಕೊಡುವಂತೆ ಒತ್ತಾಯಿಸುವ ಅಧಿಕಾರ ಸಮಿತಿಯ ಸದಸ್ಯರಿಗೆ ಖಂಡಿತಾ ಇದೆ. ಈಗ ನಿನ್ನ ಹತ್ತಿರ ಹಣ ಇಲ್ಲದೆ ಇದ್ದರೂ ನಿನ್ನ ಯಾವುದಾದರೂ ಆಸ್ತಿಯನ್ನೊ, ವಸ್ತುವನ್ನೊ ಮಾರಿ, ಕೊರತೆ ಬಂದಿರುವ ಒಂದು ಸಾವಿರ ರೂಪಾಯಿಗಳನ್ನು ತುಂಬಿಕೊಡು. ಈಗ ನಿನಗಿರುವ ದಾರಿ ಇದೊಂದೇ."

ಯುವಕ ಗಾಂಧೀಜಿಯವರಿಂದ ಅನುಕಂಪದ ಸಾಂತ್ವನವನ್ನರಸಿ ಬಂದಿದ್ದ. ತಾನು ಪ್ರಾಮಾಣಿಕನಾಗಿರುವುದು ರುಜುವಾತಾದರೆ ತಾನು ಗೆದ್ದಂತೆ ಎಂದು ಭಾವಿಸಿದ್ದ. ಆದರೆ ಗಾಂಧೀಜಿಯವರ ಈ ಕಠಿಣವಾದ ಮಾತುಗಳನ್ನು ಅವನಿಗೆ ಸಹಿಸಲಾಗಲಿಲ್ಲ. ಮಗುವಿನ ಹಾಗೆ ಗೊಳೊ ಎಂದು ಅತ್ತುಬಿಟ್ಟ. ಆಂಡ್ರೂಸ್ ಅವರಿಗೆ ಯುವಕನ ಶೋಚನೀಯ ಪರಿಸ್ಥಿತಿಯಿಂದ ಎದೆ ಕರಗಿತು. ಅವರು ಈಗಾಗಲೇ ನೊಂದು ಬೆಂದು ಪಶ್ಚಾತ್ತಾಪ ಪಟ್ಟಿರುವ ಈ ಯುವಕನ ವಿಷಯದಲ್ಲಿ ನೀವು ನಡೆದುಕೊಳ್ಳುತ್ತಿರುವುದು ಸರಿಯಲ್ಲ ಎಂದು ಗಾಂಧೀಜಿಯ ಬಳಿ ವಾದಿಸಿದರು. ಆದರೆ ಗಾಂಧೀಜಿ ಬಡಪೆಟ್ಟಿಗೆ ಬಗ್ಗುವವರಲ್ಲ. ಅವರು ಹೇಳಿದರು, "ಅವನು ಪಶ್ಚಾತ್ತಾಪಪಡಲಿ ಎಂಬುದೇ ನನ್ನ ಉದ್ದೇಶ. ಅವನ ಪಶ್ಚಾತ್ತಾಪ ಕೃತಿಯಲ್ಲಿ ಮೂಡಿ ಬರಲಿ. ಕೇವಲ ಮಾನಸಿಕ ಪಶ್ಚಾತ್ತಾಪ ಪಶ್ಚಾತ್ತಾಪವೇ ಅಲ್ಲ. ತಾನು ಮಾಡಿದ ತಪ್ಪನ್ನು ಸರಿಪಡಿಸುವುದರ ಮುಖಾಂತರವಷ್ಟೇ ನಿಜವಾದ ಪಶ್ಚಾತ್ತಾಪ ಸಾಧ್ಯ. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸಮಿತಿಯ ಸದಸ್ಯರು ಲೆಕ್ಕ ಕೊಡಬೇಕೆಂದು ಕೇಳುತ್ತಿರುವುದರಲ್ಲಿ ಯಾವ ತಪ್ಪೂ ಇಲ್ಲ. ಮೇಲಾಗಿ ಇವನು ವಿದ್ಯಾವಂತ ಯುವಕ. ಸಂಬಳ ತೆಗೆದುಕೊಳ್ಳದೆ ಸ್ವಯಂ ಸೇವೆ ಮಾಡುತ್ತಿದ್ದಾನೆ ಎನ್ನುವುದಾದರೆ ಇವನು ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಹೊರಬೇಕು ಎಂದರ್ಥ. ಏಕೆಂದರೆ ಇಂತಹ ಸ್ವಯಂಸೇವಕರು ಇತರ ಕಾಂಗ್ರೆಸ್ ಸದಸ್ಯರಿಗೆ ಆದರ್ಶಪ್ರಾಯ ರಾಗಿರಬೇಕು. ಇವನು ಸಂಪೂರ್ಣ ಹಣ ತುಂಬಿದ ನಂತರವಷ್ಟೇ ನಾನು ಇವನಿಗೆ ಏನಾದರೂ ಸಹಾಯ ಮಾಡಬಲ್ಲೆ."

ಇದಾದನಂತರ ಯುವಕನಿಗೆ ಮತ್ತೊಂದು ಸಮಸ್ಯೆ ಕಾಡಿತು. ಯುವಕ ಹೇಳಿದ, "ಗಾಂಧೀಜಿ, ನಾನು ಊರಿಗೆ ಹಿಂದಿರುಗ ಬೇಕಾಗಿದೆ; ಆದರೆ ರೈಲು ಟಿಕೆಟ್ ಕೊಳ್ಳಲೂ ಹಣವಿಲ್ಲ. ಕನಿಷ್ಠ ೩೫ ರೂಪಾಯಿಗಳಾದರೂ ಬೇಕು." ಇದನ್ನು ಕೇಳಿದ ಆಂಡ್ರೂಸ್ ಅವರಿಗೆ ಹೃದಯ ಕರಗಿತು. ಅವರು ಹೇಳಿದರು, "ಬಾಪೂ, ಕೊನೆಯ ಪಕ್ಷ ನಾವು ಈ ೩೫ ರೂಪಾಯಿಗಳನ್ನಾದರೂ ಕೊಟ್ಟು ಕಳುಹಿಸೋಣ." ಗಾಂಧೀಜಿ ದೃಢವಾಗಿ ಹೇಳಿದರು. "ಸಾಧ್ಯವೇ ಇಲ್ಲ. ನಾನು ೩೫ ರೂಪಾಯಿಗಳನ್ನು ಎಲ್ಲಿಂದ ತರಲಿ? ಸಾರ್ವಜನಿಕ ಹಣದಿಂದ ತಾನೆ ನಾವೆಲ್ಲ ಬದುಕುತ್ತಿರುವುದು. ಆ ಹಣವನ್ನು ತೆಗೆದು ಇವನಿಗೆ ಕೊಡುವುದು ಹಣದ ದುರುಪ ಯೋಗವಾಗುವುದಿಲ್ಲವೆ? ಅವನ ಬಳಿ ಹಣ ಇಲ್ಲದಿದ್ದ ಪಕ್ಷದಲ್ಲಿ ಅವನು ಕಾಲ್ನಡಿಗೆಯಲ್ಲೇ ಹಿಂದಿರುಗಲಿ. ಈಗಾಗಲೇ ಇವನಿಗೆ ಒಂದು ಸಾವಿರ ರೂಪಾಯಿಗಳ ಸಾಲವೂ ಇದೆ. ಅದಕ್ಕೆ ಈ ೩೫ ರೂಪಾಯಿ ಕೂಡ ಸೇರುವುದೇಕೆ? ಇತರರಿಂದ ಹಣ ಯಾಚಿಸದೇ ಇರುವುದು ಅವನ ಪಶ್ಚಾತ್ತಾಪದ ಮೊದಲನೇ ಹೆಜ್ಜೆಯಾಗಲಿ." ಪುನಃ ಆಂಡ್ರೂಸ್ ಅವರು, ಯುವಕ ಬಹಳ ದೂರದಿಂದ ಬಂದಿದ್ದಾನೆ, ಅಷ್ಟು ದೂರ ನಡೆಯುವುದಾದರೂ ಹೇಗೆ ಎಂದು ವಾದಿಸಿದರು. ಗಾಂಧೀಜಿ ಹೇಳಿದರು, "ದಿನಕ್ಕೆ ಇಂತಿಷ್ಟು ಎಂದು ನಡೆದು ಹೋಗಬಹುದಲ್ಲ." ಆಂಡ್ರೂಸ್ ಅವರಿಗೆ ಇದು ಸರಿಕಾಣಲಿಲ್ಲ. ಯುವಕನ ಮೇಲೆ ಇಷ್ಟೊಂದು ನಿರ್ದಯವಾಗಿ ವರ್ತಿಸುವುದು ಸರಿಯಲ್ಲ ಎಂದು ವಾದಿಸಿದರು. ಆದರೆ ಗಾಂಧೀಜಿ ಇದನ್ನು ಒಪ್ಪಲಿಲ್ಲ. ಆ ಯುವಕ ಊಟ ಮುಗಿಸಿ ಖಿನ್ನನಾಗಿ ಹೊರಟ. ಗಾಂಧೀಜಿ ಅವನಿಗೆ ಹೇಳಿದರು, "ಮನೆಗೆ ಹೋಗು, ಇನ್ನು ಮುಂದೆ ಸರಿಯಾಗಿ ನಡೆದುಕೊ ಮತ್ತು ಕಾಗದ ಬರೆ. ದೇವರು ನಿನಗೆ ಒಳ್ಳೆಯದು ಮಾಡಲಿ. ಆದರೆ ನೀನು ತಕ್ಷಣ ಕಾಗದ ಬರೆಯುತ್ತೀಯೆ ಎಂದು ನಾನು ನಿರೀಕ್ಷಿಸುತ್ತೇನೆ." ಈಗ ಆಂಡ್ರೂಸ್‌ರವರು ಯುವಕನೊಂದಿಗೆ ಸ್ವಲ್ಪ ದೂರ ಹೋಗಿ ಬೀಳ್ಕೊಟ್ಟು ಬರುವುದಾಗಿ ಹೇಳಿ ಹೊರಟರು. ನಂತರ ಯುವಕ ನೊಡನೆ ರೈಲ್ವೇ ಸ್ಟೇಷನ್‌ವರೆಗೆ ನಡೆದು, ಈಗಾಗಲೇ ವ್ಯವಸ್ಥೆ ಮಾಡಿ ಕೊಂಡಂತೆ ೩೫ ರೂಪಾಯಿಗಳನ್ನು ಯುವಕನಿಗೆ ಕೊಟ್ಟು, ರೈಲು ಹತ್ತಿ ಮನೆಗೆ ಹೋಗುವಂತೆ ಹೇಳಿ ಬೀಳ್ಕೊಟ್ಟರು.

ಆಶ್ರಮಕ್ಕೆ ಹಿಂದಿರುಗಿದ ನಂತರ ಆಂಡ್ರೂಸ್‌ರವರು ಗಾಂಧೀಜಿ ಯವರ ಬಳಿ ಹೋಗಿ ಹೇಳಿದರು, "ಬಾಪೂ, ನಾನು ಒಂದು ತಪ್ಪು ಒಪ್ಪಿಕೊಳ್ಳಬೇಕಾಗಿದೆ." ತಕ್ಷಣ ಗಾಂಧೀಜಿ ಹೇಳಿದರು, "ನನಗೆ ಗೊತ್ತಿಲ್ಲವೆ? ನೀವು ಆ ಹುಡುಗನಿಗೆ ರೈಲಿನ ಖರ್ಚು ಕೊಟ್ಟು ಬಂದಿದ್ದೀರಿ. ನೀವು ಯಾವಾಗಲೂ ಹೀಗೆ. ನಿಮ್ಮನ್ನು ಯಾರು ತಾನೆ ತಿದ್ದಲು ಸಾಧ್ಯ?" ಗಾಂಧೀಜಿ ಮತ್ತು ಆಂಡ್ರೂಸ್ ಇಬ್ಬರೂ ಒಟ್ಟಾಗಿ ನಕ್ಕರು.

## ಚೀನೀ ಯುವಕನ ಪರಿವರ್ತನೆ

೧೯೨೫ ರ ಸುಮಾರಿನಲ್ಲಿ ಗಾಂಧೀಜಿ ಕೊಲ್ಕತಾಗೆ ಬಂದಿದ್ದರು. ಅವರು ದೇಶಬಂಧು ಚಿತ್ತರಂಜನ್ ದಾಸ್ ಪ್ರತಿಷ್ಠಾನಕ್ಕಾಗಿ ಹತ್ತು ಲಕ್ಷ ರೂಪಾಯಿಗಳನ್ನು ಸಂಗ್ರಹಿಸುತ್ತಿದ್ದರು. ಇದೇ ಸಮಯದಲ್ಲಿ ಅವರಿಗೆ ಒಬ್ಬ ಚೀನೀ ಯುವಕನಿಂದ ಒಂದು ಕಾಗದ ಬಂದಿತು. ಅವನು ೨೫ ವರ್ಷದ ಯುವ ಕವಿ, ಬರಹಗಾರ. ಅವನು ಟ್ಯಾಗೋರ್ ಮತ್ತು ಗಾಂಧಿಯವರಿಂದ ಪ್ರಭಾವಿತನಾಗಿದ್ದ; ಕೊಲ್ಕತಾದ ಶಾಂತಿನಿಕೇತನದಲ್ಲಿ ಅಧ್ಯಯನ ಮಾಡುತ್ತಿದ್ದ. ಸರಳ ಹೃದಯದ ಈ ಯುವಕ ಶಾಂತಿನಿಕೇತನದಲ್ಲಿ ಎಲ್ಲರ ಮನಸ್ಸನ್ನೂ ಸೂರೆಗೊಂಡಿದ್ದ. ಆದರೂ ಒಂದು ಸಮಸ್ಯೆ ಹುಟ್ಟಿಕೊಂಡಿತು. ಶಾಂತಿನಿಕೇತನದ ಕೆಲವರಿಗೆ ಇವನೊಬ್ಬ ಬೇಹುಗಾರ ಎಂಬ ಅನುಮಾನ ಹುಟ್ಟಿತು. ಸಂಶಯದ ಈ ಕರಾಳಛಾಯೆ ಇವನಿಗೆ ಸಹಿಸಲಸದಳವಾಯಿತು. ದುಃಖದಿಂದ ತನ್ನ ಕಷ್ಟವನ್ನು ಹೇಳಿಕೊಂಡು ಗಾಂಧೀಜಿಗೆ ಕಾಗದ ಬರೆದಿದ್ದ. ಗಾಂಧೀಜಿ ಕೊಲ್ಕತಾದಲ್ಲೇ ಇದ್ದುದರಿಂದ ತಮ್ಮನ್ನು ಬಂದು ಕಾಣುವಂತೆ ತಿಳಿಸಿ, ಪತ್ರವೊಂದನ್ನು ಬರೆದರು.

ಈ ಚೀನೀ ಯುವಕ ಬಂದು ಗಾಂಧೀಜಿಯವರನ್ನು ಭೇಟಿಯಾದ. ಗಾಂಧೀಜಿ ಯುವಕನನ್ನು ನೇರವಾಗಿ ಪ್ರಶ್ನಿಸಿದರು, "ನೋಡು, ಶಾಂತಿನಿಕೇತನದವರೆಲ್ಲ ನನಗೆ ಸ್ನೇಹಿತರು, ಅವರೆಲ್ಲ ಒಳ್ಳೆಯ ಜನ, ಹೊರ ದೇಶದ ಜನರನ್ನು ಅವರು ಯಾವಾಗಲೂ ಸ್ವಾಗತಿಸುತ್ತಾರೆ; ಆದರೆ ನಿನ್ನನ್ನು ಮಾತ್ರ ಬೇಹುಗಾರ ಎಂದು ಏಕೆ ಅನುಮಾನಿಸುತ್ತಾರೆ? ನೀನು ನಿಜವಾಗಿಯೂ ಬೇಹುಗಾರನೇ?" ಆಗ ಚೀನೀ ಯುವಕ ಸರಳಭಾವದಿಂದ ಉತ್ತರಿಸಿದ, "ಹೌದು, ಶಾಂತಿನಿಕೇತನದ ಜನ ನಿಜವಾಗಿಯೂ ಒಳ್ಳೆಯವರೆ. ಆದರೆ ನನ್ನ ಬಗ್ಗೆ ಯಾರೋ ತಪ್ಪಾಗಿ ಹೇಳಿರಬಹುದು." ಯುವಕನ ಋಜುತ್ವದ ಬಗ್ಗೆ ಗಾಂಧೀಜಿಗೆ ಯಾವ ಅನುಮಾನವೂ ಬರಲಿಲ್ಲ. ಯುವಕನ ಸರಳತೆಯಿಂದ ಸಂತೋಷಗೊಂಡ ಗಾಂಧೀಜಿ ಹೇಳಿದರು, "ನೀನು ಬೇಹುಗಾರನಲ್ಲ ಎಂದು ದೃಢಪಡಿಸಿ ನಾನು ಶಾಂತಿನಿಕೇತನಕ್ಕೆ ಕಾಗದ ಬರೆಯುತ್ತೇನೆ. ನೀನು ನೆಮ್ಮದಿಯಿಂದ ಶಾಂತಿನಿಕೇತನದಲ್ಲಿ ವಾಸಿಸಬಹುದು." ಈ ಯುವಕ ಗಾಂಧೀಜಿಯವರ ಭೇಟಿಯಿಂದ ಎಷ್ಟು ಪ್ರಭಾವಿತನಾದನೆಂದರೆ ತಾನು ಶಾಂತಿನಿಕೇತನಕ್ಕೆ ಮರಳುವುದಿಲ್ಲವೆಂದೂ, ಬದಲಿಗೆ ಗಾಂಧೀಜಿಯವರ ಸಾನ್ನಿಧ್ಯದಲ್ಲೇ ವಾಸಿಸಲು ಅವಕಾಶ ಕೊಡಬೇಕೆಂದೂ ಬೇಡಿಕೊಂಡ. ಗಾಂಧೀಜಿ ಸ್ಪಷ್ಟವಾಗಿ ಹೇಳಿದರು, "ನೋಡು, ನಮ್ಮ ಆಶ್ರಮ ಶಾಂತಿನಿಕೇತನಕ್ಕಿಂತ ಕಷ್ಟಕರವಾದ ಸ್ಥಳ; ನೀನು ಕೇವಲ ಅಧ್ಯಯನ ಮಾಡುತ್ತ ಕಾಲ ಕಳೆಯಲು ಸಾಧ್ಯವಿಲ್ಲ. ಸಾಕಷ್ಟು ದೈಹಿಕ ಶ್ರಮವನ್ನು ಮಾಡಲೇಬೇಕಾಗುತ್ತದೆ." ಯುವಕ ಹೇಳಿದ, "ನಾವು ಚೀನೀಯರು ಶ್ರಮಜೀವಿಗಳು. ಕಷ್ಟಪಟ್ಟು ಕೆಲಸ ಮಾಡಲು ನಾನೆಂದೂ ಹೆದರುವವನಲ್ಲ."

ಗಾಂಧೀಜಿ ಅನುಮತಿ ಕೊಟ್ಟರು. ಆದರೆ ಅವನ ಚೀನೀ ಹೆಸರು ಉಚ್ಚರಿಸಲು ಕಷ್ಟವಾಗುತ್ತಿತ್ತು. ಹಾಗಾಗಿ ಅವನಿಗೆ, 'ಶಾಂತಿ' ಎಂದು ಹೆಸರಿಟ್ಟರು. ಶಾಂತಿ ಈಗ ಸಬರಮತಿ ಆಶ್ರಮಕ್ಕೆ ಹೋಗಿ ವಾಸಿಸಲಾರಂಭಿಸಿದ. ಅವನು ಆ ಆಶ್ರಮದಲ್ಲಿ ಇರುವವರೆಗೆ 'ಶಾಂತಿ' ಹೆಸರಿನಿಂದಲೇ ಉಳಿದ; ಎಂದಿಗೂ ಹಸನ್ಮುಖಿಯಾಗಿ, ಸರಳವಾಗಿ ಎಲ್ಲರೊಡನೆ ಬೆರೆಯುತ್ತಿದ್ದ; ಬಹಳ ಬೇಗ ಸಬರಮತಿ ಆಶ್ರಮವಾಸಿಗಳ ಕಣ್ಮಣಿಯಾಗಿ ಬಿಟ್ಟ. ವಿಶೇಷವಾಗಿ ಮಕ್ಕಳ ಮಧ್ಯೆ ವಿನೋದದಿಂದ ಬೆರೆಯುತ್ತಿದ್ದ. ಜೊತೆಗೆ ಶಾಂತಿ ಕಷ್ಟಸಹಿಷ್ಣು. ಅಡುಗೆ ಮನೆಗೆ ನೀರು ಹೊತ್ತು ತರುವುದು; ಪಾತ್ರೆಗಳನ್ನು ಉಜ್ಜಿ ತೊಳೆಯುವುದು; ಅನಂತರ ಅಧ್ಯಯನದಲ್ಲಿ ತೊಡಗುವುದು ಇವನ ದಿನಚರಿಯಾಯಿತು. ಚರಕದಲ್ಲಿ ನೂಲು ತೆಗೆಯುವುದನ್ನೂ ಅವನು ಬಹಳ ಬೇಗ ಕಲಿತುಬಿಟ್ಟ.

ಈ ವೇಳೆಯಲ್ಲಿ ಅವನಿಗೆ ಗಾಂಧೀಜಿಯವರ ಕೃತಿಗಳನ್ನು ಅಧ್ಯಯನ ಮಾಡುವ ಅವಕಾಶ ಸಿಕ್ಕಿತು. ಬಹುಶಃ ಗಾಂಧೀಜಿಯವರ ಸತ್ಯಸಂಧತೆ ಅವನ ಅಂತರಾತ್ಮವನ್ನು ಕಲಕಿರಬೇಕು. ಈವರೆಗೂ ಅರಿಯದ ಪ್ರಾಮಾಣಿಕ ಬದುಕಿನ ಹೊಸ ಆಯಾಮಗಳ ಸಾಧ್ಯತೆಯನ್ನೂ ಅವನು ಮನಗಂಡಿರಬೇಕು. ತನ್ನ ಹಿಂದಿನ ಜೀವನದ ಘಟನೆಗಳನ್ನೆಲ್ಲ ಬರೆಯಲಾರಂಭಿಸಿದ. ದಿನದಿಂದ ದಿನಕ್ಕೆ ಪುಟಗಳ ಸಂಖ್ಯೆ ಬೆಳೆಯುತ್ತಾ ಹೋಯಿತು. ಮನಸ್ಸನ್ನು ತೊಳೆಯುವುದು ಎಂದರೆ ಅದನ್ನು ಮೊದಲು ತೆರೆದಿಡುವುದಲ್ಲವೆ? ಗಾಂಧೀಜಿಯವರ ಸಾನ್ನಿಧ್ಯದಲ್ಲಿ ಅವನಿಗೆ ಈ ಅವಕಾಶ ದೊರೆಯಿತು. ತನ್ನ ಚರಿತ್ರೆಯನ್ನು ಕೈಯಲ್ಲಿ ಹಿಡಿದು ಗಾಂಧೀಜಿಯ ಕೊಠಡಿಗೆ ಹೋಗಿ, ಅದನ್ನು ಅವರ ಕೈಗೆ ಕೊಟ್ಟು ಹೇಳಿದ, "ಗಾಂಧೀಜಿ, ನಾನು ಭಾರತಕ್ಕೆ ಬರುವ ಮೊದಲು ಸಿಂಗಪೂರ್‌ನಲ್ಲಿ ಬೇರೆ ಚೀನೀ ಯುವಕರಂತೆ ಕೆಟ್ಟ ಜೀವನ ನಡೆಸಿದ್ದೆ. ಈಗ ನನ್ನೊಳಗೆ ಏನೋ ತುಮುಲ ಎದ್ದಿದೆ. ನನ್ನ ಮನಸ್ಸನ್ನು ನಿಮ್ಮೆದುರು ತೆರೆದಿಡಬೇಕು ಎನ್ನಿಸಿದೆ. ಇದರಲ್ಲಿ ಎಲ್ಲವನ್ನೂ ಬರೆದಿದ್ದೇನೆ. ದಯಮಾಡಿ ಇದನ್ನು ಓದಿ. ಅಷ್ಟೇ ಅಲ್ಲ, ನನ್ನ ಅಂತರಂಗದ ಪರಿಶುದ್ಧಿಗಾಗಿ ನಾನು ಹತ್ತು ದಿನಗಳ ಉಪವಾಸ ಮಾಡಬೇಕೆಂದು ನಿರ್ಧರಿಸಿದ್ದೇನೆ. ದಯವಿಟ್ಟು ಅನುಮತಿ ಕೊಡಿ."

ಯುವಕ ಕೊಟ್ಟ ದೊಡ್ಡ ಕಡತದ ಕಡೆ ನೋಡಿ ಗಾಂಧೀಜಿ ಹೇಳಿದರು, "ನೀನು ಕೊಟ್ಟಿರುವ ಈ ಬರಹ ಬಹಳ ದೊಡ್ಡದಾಗಿದೆ. ಅದನ್ನು ಓದಲು ತುಂಬಾ ಸಮಯ ಹಿಡಿಯುತ್ತದೆ. ಆದರೂ ಅದನ್ನು ನಾನು ಓದುತ್ತೇನೆ. ಆದರೆ ತಕ್ಷಣ ಉಪವಾಸ ಕೈಗೊಳ್ಳಬೇಡ. ನೀನು ಬರೆದಿರುವುದನ್ನು ಓದಿದ ನಂತರ ನಿನ್ನ ಅವಶ್ಯಕತೆ ಏನು, ನೀನು ಏನನ್ನು ಹುಡುಕುತ್ತಿದ್ದೀಯೆ ಎಂದು ನನಗೆ ತಿಳಿಯುತ್ತದೆ. ಅನಂತರ ನಾನು ಉಪವಾಸಕ್ಕೆ ಅನುಮತಿ ಕೊಡುತ್ತೇನೆ." ಮತ್ತೆ ಹೇಳಿದರು, "ಉಪವಾಸ ಎನ್ನುವುದು ಒಂದು ಪವಿತ್ರ ವ್ರತ. ಅದನ್ನು ಸಿಕ್ಕಸಿಕ್ಕದ್ದಕ್ಕೆಲ್ಲಾ ಬಳಸಬಾರದು. ಆ ವ್ರತ ಆಚರಿಸುವ ಮೊದಲು ನಾವು ಅದಕ್ಕೆ ತಕ್ಕ ಯೋಗ್ಯತೆ ಪಡೆಯಬೇಕು."

ಅನಂತರ ಗಾಂಧೀಜಿ ಚೀನೀ ಯುವಕನ ಚರಿತ್ರೆಯನ್ನು ಓದಿದರು. ಅವನ ಸತ್ಯನಿಷ್ಠೆಯ ಬಗ್ಗೆ ಅವರಿಗೆ ಮೆಚ್ಚುಗೆಯಾಯಿತು. ಅವನು ಪರಿವರ್ತನೆಯ ಹಾದಿಯಲ್ಲಿರುವುದು ಸ್ಪಷ್ಟವಾಯಿತು. ಶಾಂತಿಗೆ ಹತ್ತು ದಿನಗಳ ಉಪವಾಸ ಮಾಡಲು ಅನುಮತಿ ನೀಡಿದರು. ಹತ್ತು ದಿನಗಳ ಉಪವಾಸ ಹುಡುಗಾಟವಲ್ಲ. ಆದರೆ ಶಾಂತಿ ಧೈರ್ಯವಾಗಿ ತನ್ನ ಉಪವಾಸ ಮುಂದುವರೆಸಿದ. ಪ್ರತಿ ದಿನ ಗಾಂಧೀಜಿ ಶಾಂತಿಯ ಕೊಠಡಿಗೆ ಹೋಗಿ ವಿಚಾರಿಸುತ್ತಿದ್ದರು. ಹತ್ತು ಹದಿನೈದು ನಿಮಿಷಗಳ ಕಾಲ ಅವನೊಡನೆ ಮಾತನಾಡುತ್ತಿದ್ದರು. ಶಾಂತಿ ಹತ್ತು ದಿನಗಳ ಉಪವಾಸದ ನಂತರ ಗಾಂಧೀಜಿಯವರ ಎದುರಿಗೆ ಕೆಲವು ಪ್ರತಿಜ್ಞೆಗಳನ್ನು ಕೈಗೊಂಡ. ಬಹುಶಃ ತನ್ನ ಭವಿಷ್ಯ ಜೀವನದಲ್ಲಿ ನಡೆದುಕೊಳ್ಳುವ ಬಗ್ಗೆ ಈ ಪ್ರತಿಜ್ಞೆಗಳನ್ನು ಕೈಗೊಂಡಿರಬೇಕು. ಈ ಪ್ರತಿಜ್ಞೆಗಳನ್ನು ಹಾಳೆಗಳಲ್ಲಿ ಎರಡು ನಕಲುಗಳಾಗಿ ಬರೆಯಲಾಯಿತು. ಪ್ರತಿಜ್ಞಾಪತ್ರಕ್ಕೆ ಶಾಂತಿ ಸಹಿ ಹಾಕಿದ, ಗಾಂಧೀಜಿ ಸಾಕ್ಷಿಯಾಗಿ ಸಹಿ ಮಾಡಿದರು. ಒಂದು ಪ್ರತಿಯನ್ನು ಗಾಂಧೀಜಿಗೆ ಕೊಟ್ಟು, ಮತ್ತೊಂದನ್ನು ಶಾಂತಿ ತೆಗೆದುಕೊಂಡ. ಸ್ವದೇಶಕ್ಕೆ ಮರಳಿದ ಮೇಲೆ ಈ ಚೀನೀ ಯುವಕ ಒಂದು ಪತ್ರಿಕೆ ಹೊರಡಿಸಿದ. ಅದಕ್ಕೆ ಸಂಪಾದಕೀಯವನ್ನು ಬರೆದು ಕೆಳಗೆ 'ಶಾಂತಿ' ಎಂದು ಸಹಿ ಮಾಡುತ್ತಿದ್ದ. ಈ ಪತ್ರಿಕೆಯ ಮೂಲಕ ಆತ ಗಾಂಧೀಜಿಯನ್ನು ಚೀನೀಯರಿಗೆ ಪರಿಚಯಿಸಿದ.

*(ಮುಂದುವರಿಯುವುದು)*